ಕರ್ನಾಟಕ ವಿಧಾನಸಭೆ

ಬುಧವಾರ 1ನೇ ಆಗಸ್ಟ್ 2001ರಂದು ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 10 ಗಂಟೆ 40 ನಿಮಿಷಕ್ಕೆ ಸಮಾವೇಶಗೊಂಡಿತು.

ಅಧ್ಯಕ್ಷರು: ಶ್ರೀ ಎಂ.ಪಿ.ವೆಂಕಟಪ್ಪರವರು ಪೀಠವನ್ನು ಅಲಂಕರಿಸಿದ್ದರು.

1) ಪ್ರಶ್ನೋತ್ತರಗಳು

(ಅ) ತಡೆ ಹಿಡಿಯಲಾದ ಪ್ರಶ್ನೋತ್ತರಗಳು

ಬೆಂಗಳೂರು ನಗರದಲ್ಲಿ ವಾಯು ಮಾಲಿನ್ಯ.

167(2326)

ಶ್ರೀ ಸುಬ್ಬಾರೆಡ್ಡಿ ಕೆ.ಎನ್.(ಬಸವನಗುಡಿ): ಮಾನ್ಯ ಅರಣ್ಯ ಮತ್ತು ಪರಿಸರ ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಬೆಂಗಳೂರು ನಗರದಲ್ಲಿ ವಾಯು ಮಾಲಿನ್ಯ ಹೆಚ್ಚಾಗಿದ್ದು ಜನರ ಆರೋಗ್ಯ ಹದಗೆಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2. ಬೆಂಗಳೂರು ನಗರದಲ್ಲಿ ವಾಯು ಮಾಲಿನ್ಯ ತಡೆಯಲು ಸರ್ಕಾರ ಕೈಗೊಂಡ ಕ್ರಮಗಳೇನು?

3. ಯಥೇಚ್ಚವಾಗಿ ಹೊಗೆ ಉಗುಳುವ ವಾಹನಗಳ ಮೇಲೆ ಸರ್ಕಾರ ಯಾವ ಕ್ರಮ ಕೈಗೊಳ್ಳಲಾಗಿದೆ? (ಸರ್ಕಾರಿ ಮತ್ತು ಖಾಸಗಿ ವಾಹನಗಳ ವಿವರಗಳನ್ನು ನೀಡುವುದು)

ಶ್ರೀ ಕೆ.ಎಚ್.ರಂಗನಾಥ್ (ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು):

1. ಹೌದು.

2. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ ಕಾಯ್ದೆ 1981ರ ಅಡಿಯಲ್ಲಿ ಉದ್ದಿಮೆಗಳಿಂದ ಹೊರಬರುವ ವಾಯುವಿನ ಮೂಲಗಳಿಗೆ ನಿಗದಿತ ನಿಯಂತ್ರಣ ಉಪಕರಣಗಳ ಜೊತೆಗೆ ಮಾನಕಗಳನ್ನು ನಿಗದಿಪಡಿಸಿ ಸ್ಥಾಪನಾ ಸಮ್ಮತಿ ಪತ್ರ ಹಾಗೂ ಕಾರ್ಯಾರಂಭಕ್ಕೆ ಸಮ್ಮತಿ

ಪತ್ರಗಳನ್ನು ನೀಡುತ್ತಿದೆ. ಮಂಡಳಿಯು ಎಲ್ಲಾ ಉದ್ದಿಮೆಗಳನ್ನು ನಿಗಧಿತವಾಗಿ ಪರಿಶೀಕ್ಷಿಸಿ ಮಂಡಳಿಯು ಸಮ್ಮತಿ ಪತ್ರ ನೀಡುವಾಗ ವಿಧಿಸಲಾಗಿರುವ ಷರತ್ತುಗಳನ್ನು ಪಾಲನೆ ಮಾಡುತ್ತಿರುವುದರ ಬಗ್ಗೆ ಖಾತ್ರಿ ಪಡಿಸಿಕೊಳ್ಳುತ್ತಿದೆ. ಸಮ್ಮತಿ ಪತ್ರದಲ್ಲಿನ ಷರತ್ತುಗಳ ಉಲ್ಲಂಘನೆ ಕಂಡು ಬಂದಲ್ಲಿ ಅಂತಹ ಉದ್ದಿಮೆಗಳಿಗೆ ಕಾರಣ ಕೇಳುವ ನೋಟೀಸ್ ಜಾರಿ ಮಾಡುವುದು. ಮೊಕದ್ದಮೆ ಹೂಡುವುದು ಹಾಗೂ ಕೈಗಾರಿಕೆ ಮುಚ್ಚುವ ಆದೇಶ ನೀಡುವ ಕ್ರಮಗಳನ್ನು ವಾಯು ಕಾಯ್ದೆಯ ಅಡಿಯಲ್ಲಿ ತೆಗೆದುಕೊಳ್ಳುವ ಮೂಲಕ ಉದ್ದಿಮೆಗಳಿಂದ ಉಂಟಾಗುವ ವಾಯು ಮಾಲಿನ್ಯವನ್ನು ತಡೆಗಟ್ಟುತ್ತಿದೆ.

ಬೆಂಗಳೂರು ನಗರ ವಾಯು ಮಾಲಿನ್ಯವು ಪ್ರಮುಖವಾಗಿ ವಾಹನಗಳ ಹೊಗೆಯಿಂದ ಉಂಟಾಗುತ್ತಿದ್ದು, ವಾಹನಗಳಿಂದ ಹೊರ ಬರುವ ಹೊಗೆಯನ್ನು ತಪಾಸಣೆ ಮಾಡಿ ತಪ್ಪಿತಸ್ಥ ವಾಹನಗಳ ಮಾಲೀಕರ ವಿರುದ್ಧ ಕ್ರಮ ಕೈಗೊಳ್ಳುವ ಅಧಿಕಾರವನ್ನು ಸಾರಿಗೆ ಮತ್ತು ಪೋಲೀಸ್ ಇಲಾಖೆಗಳಿಗೆ ಮೋಟಾರು ವಾಹನ ಕಾಯ್ದೆಯಲ್ಲಿ ಅವಕಾಶಗಳಿವೆ. ಆದುದರಿಂದ ಸದರಿ ಇಲಾಖೆಗಳು ನಿಗಧಿತ ಪ್ರಮಾಣಕ್ಕಿಂತ ಹೆಚ್ಚಿನ ಹೊಗೆಯನ್ನು ಉಗುಳುವ ವಾಹನಗಳ ಮಾಲೀಕರ ವಿರುದ್ಧ ಕ್ರಮ ಕೈಗೊಳ್ಳಲು ಕಾಯ್ದೆಗಳ ಅಡಿಯಲ್ಲಿ ಅಧಿಕಾರ ಪ್ರದತ್ತವಾಗಿರುತ್ತದೆ.

ಮಂಡಳಿಯು ಬೆಂಗಳೂರಿನ ನಾಲ್ಕು ಪ್ರದೇಶಗಳಲ್ಲಿ ಪರಿವೇಷ್ಟಕ ಗಾಳಿಯ ಗುಣ ಮಟ್ಟವನ್ನು ಮಾಪನ ಮಾಡುತ್ತಿದೆ. ಮಂಡಳಿಯು ಸಂಬಂಧಪಟ್ಟ ಇಲಾಖೆಗಳಿಗೆ ಪತ್ರ ಬರೆದು ವಾಹನಗಳಿಂದ ಉಂಟಾಗುತ್ತಿರುವ ವಾಯುಮಾಲಿನ್ಯವನ್ನು ತಡೆಗಟ್ಟಲು ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಕೋರಿರುತ್ತದೆ. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳ ಹೊಂದಿರುವ ಪರಿಸರ ವಾಹಿನಿ ವಾಹನಗಳಿಂದ ಹೊರಬರುವ ಹೊಗೆಯ ಬಗ್ಗೆ ಜನರಲ್ಲಿ ಪ್ರಜ್ಞೆ ಮೂಡಿಸಲಾಗುತ್ತಿದೆ. ಈ ವ್ಯಾನ್‌ಗಳು ಸಾರಿಗೆ ಇಲಾಖೆಗೆ ಸಹಕಾರ ನೀಡುತ್ತಿವೆ.

ಬೆಂಗಳೂರಿನ ಐದು ಪ್ರಮುಖ ಚೆಕ್ ಪೋಸ್ಟ್‌ಗಳಲ್ಲಿ ಈ ಐದು ವಾಹನಗಳು ನಿಗಧಿತ ಪ್ರಮಾಣಕ್ಕಿಂತ ಹೆಚ್ಚಿನ ಹೊಗೆಯನ್ನು ಹೊರಸೂಸುವ ವಾಹನಗಳನ್ನು ಬೆಂಗಳೂರು ನಗರದೊಳಗೆ ಬಾರದಂತೆ ತಡೆಯುವ ಕಾರ್ಯವನ್ನು ಮಾಡುತ್ತಿವೆ.

3. ನಿಗಧಿತ ಪ್ರಮಾಣಕ್ಕಿಂತ ಹೆಚ್ಚಿನ ಹೊಗೆಯನ್ನು ಹೊರಸೂಸುವ ವಾಹನಗಳ ವಿರುದ್ಧ ಕ್ರಮಗಳನ್ನು ಜರುಗಿಸಲಾಗಿರುತ್ತದೆ. ಈ ಕ್ರಮಗಳನ್ನು ಜರುಗಿಸುವ ಅಧಿಕಾರವು ಸಾರಿಗೆ ಇಲಾಖೆಗೆ ಪ್ರದತ್ತವಾಗಿರುತ್ತದೆ. ಸಾರಿಗೆ ಇಲಾಖೆ ವಾಹನಗಳ ಹೊಗೆಯನ್ನು ಪರಿಶೀಲಿಸಲು ತಪಾಸಣೆ ನಡೆಸಿರುತ್ತದೆ. 375 ಸರ್ಕಾರಿ ವಾಹನಗಳ

ತಪಾಸಣೆ ನಡೆಸಿ, 55 ವಾಹನಗಳ ವಿರುದ್ಧ ಮೊಕದ್ದಮೆ ಹೂಡಲಾಗಿದೆ. ಹಾಗೂ 5527 ಖಾಸಗಿ ವಾಹನಗಳ ತಪಾಸಣೆ ನಡೆಸಿ 647 ವಾಹನಗಳ ವಿರುದ್ಧ ಮೊಕದ್ದಮೆ ಹೂಡಲಾಗಿದೆ. ಹಾಗೂ ರೂ. 3,77,290 ದಂಡ ವಸೂಲು ಮಾಡಲಾಗಿದೆ.

ಶ್ರೀ ಕೆ.ಎನ್.ಸುಬ್ಬಾರೆಡ್ಡಿ: ಮಾನ್ಯ ಅಧ್ಯಕ್ಷರೆ, ನಾನು ಕೇಳಿರುವ ಪ್ರಶ್ನೆಗಳಿಗೆ ಮಾನ್ಯ ಸಚಿವರು ಉತ್ತರಗಳನ್ನು ಒದಗಿಸಿದ್ದಾರೆ. ಬೆಂಗಳೂರು ನಗರದಲ್ಲಿ ಮುಖ್ಯವಾಗಿ ಆನಂದರಾವ್ ಸರ್ಕಲ್ ಹಾಗೂ ಕೆಂಪೇಗೌಡ ಸರ್ಕಲ್ ಬಳಿ ವಾಹನಗಳ ದಟ್ಟಣೆಯಿಂದ ವಿಪರೀತ ವಾಯು ಮಾಲಿನ್ಯವುಂಟಾಗುತ್ತಿರುವುದರಿಂದ ಇದರ ಪ್ರಮಾಣ ಎಷ್ಟಿದೆ ಎಂಬುದನ್ನು ಮಾನ್ಯ ಸಚಿವರು ತಿಳಿಸಬೇಕು. ವಾಹನಗಳಿಂದ ಹೊರಬರುವ ಹೊಗೆಯನ್ನು ತಪಾಸಣೆ ಮಾಡಿ ತಪ್ಪಿತಸ್ಥ ವಾಹನಗಳ ಮಾಲೀಕರ ವಿರುದ್ಧ ಕ್ರಮ ಕೈಗೊಳ್ಳಲಾಗುತ್ತಿದೆಯೆಂದು ಸಚಿವರು ತಿಳಿಸಿದ್ದರೂ ಪರಿಸರ ಸಂಬಂಧಿತ ಏರ್ಪಡಿಸುವ ಯಾವುದೇ ಕಾರ್ಯಕ್ರಮಗಳಿಗೆ ಅವರು ಭಾಗವಹಿಸುತ್ತಿಲ್ಲದಿರುವುದರ ಕುರಿತು ನಾನು ಅವರ ಮೇಲೆ ಗುರುತರವಾದ ಆಪಾದನೆ ಮಾಡುತ್ತಿದ್ದೇನೆ. ಗಿಡ ನೆಡುವ ಕಾರ್ಯಕ್ರಮಕ್ಕೆ ಕರೆದಿದ್ದರೂ ಬರುವುದಿಲ್ಲವೆಂದಿದ್ದಾರೆ. ನಗರದಲ್ಲಿ ಶಬ್ದ ಹಾಗೂ ವಾಯು ಮಾಲಿನ್ಯ ಅಧಿಕಗೊಳ್ಳುತ್ತಿರುವುದರಿಂದ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಸತ್ತು ಹೋಗಿದೆಯೇ ಎಂದು ನಾನು ಪ್ರಶ್ನಿಸುತ್ತಿದ್ದೇನೆ. ಬೆಂಗಳೂರು ನಗರದಲ್ಲಿ ಪ್ರತಿನಿತ್ಯವೂ ವಾಯು ಮಾಲಿನ್ಯದಿಂದಾಗಿ ಪರಿಸರ ಹದಗೆಡುತ್ತಿರುವುದನ್ನು ಮಾಧ್ಯಮಗಳಲ್ಲಿ ನೋಡುತ್ತಿದ್ದೇವೆ ಹಾಗೂ ಕೇಳುತ್ತಿದ್ದೇವೆ. ಇದು ಬಹಳ ದುಃಖಕರ ಹಾಗೂ ದುರಾದೃಷ್ಟಕರ ಸಂಗತಿಯಾಗಿರುವುದರಿಂದ ವಾಯು ಮಾಲಿನ್ಯದಿಂದ ಆರೋಗ್ಯವನ್ನು ರಕ್ಷಿಸಿಕೊಳ್ಳಲು ಬೆಂಗಳೂರು ನಗರದ ನಾಗರಿಕರಿಗೆ 'ಮಾಸ್ಕ್'ಗಳನ್ನು ಒದಗಿಸುವ ವ್ಯವಸ್ಥೆಯನ್ನು ಸರ್ಕಾರ ಮಾಡುತ್ತದೆಯೇ ಎಂಬುದಕ್ಕೆ ಮಾನ್ಯ ಸಚಿವರು ಉತ್ತರಿಸಬೇಕು.

ಶ್ರೀ ಕೆ.ಎಚ್.ರಂಗನಾಥ್(ಅರಣ್ಯ ಮತ್ತು ಪರಿಸರ ಸಚಿವರು): ಮಾನ್ಯ ಅಧ್ಯಕ್ಷರೆ, ಅವರು ಏನಾದರೂ ಕೇಳಿದ್ದರೆ ಉತ್ತರ ಕೊಡಬಹುದು. ಅವರು ಏನನ್ನೂ ಕೇಳಿಯೇ ಇಲ್ಲ.

ಶ್ರೀ ಕೆ.ಎನ್.ಸುಬ್ಬಾರೆಡ್ಡಿ: ಬಹುಶಃ ಅವರಿಗೆ ಇದರ ಗಂಭೀರತೆ ಗೊತ್ತಿಲ್ಲ. [xxx]

ಶ್ರೀ ಡಿ.ಬಿ.ಚಂದ್ರೇಗೌಡ: ತಾವು ಆ ರೀತಿ ಮಾತನಾಡುವುದು ಸರಿಯಲ್ಲ.

Mr.SPEAKER: Remove that remark.

[xxx] ಮಾನ್ಯ ಅಧ್ಯಕ್ಷರ ಅಪ್ಪಣೆ ಮೇರೆಗೆ ಈ ಪದವನ್ನು ಕಡತದಿಂದ ತೆಗೆಯಲಾಗಿದೆ

ಶ್ರೀ ಕೆ.ಎನ್.ಸುಬ್ಬಾರೆಡ್ಡಿ: ಓರಿಯ ಸಚಿವರುಗಳು ಏನೂ ಮಾಡುತ್ತಿಲ್ಲ. ಕಿರಿಯ ಸಚಿವರಿಗಾದರೂ ಕೊಡಿ.

ಶ್ರೀ ಡಿ.ಬಿ.ಚಂದ್ರೇಗೌಡ: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಆ ರೀತಿ ಮಾತನಾಡಿರುವುದು ಕಡತಕ್ಕೆ ಹೋಗಬಾರದು.

ಅಧ್ಯಕ್ಷರು: ಅದನ್ನು ಕಡತದಿಂದ ತೆಗೆದು ಹಾಕಿ.

SRI K.N.SUBBAREDDY: What is the degree of environment now in Ananda Rao circle?

ಅಧ್ಯಕ್ಷರು: ಮಾನ್ಯ ಸದಸ್ಯರು ಕೇಳುವುದನ್ನೇ ಕನ್‌ಫ್ಯೂಸ್ ಮಾಡಿಕೊಂಡು ಎಲ್ಲರನ್ನೂ ಕನ್‌ಫ್ಯೂಸ್ ಮಾಡುತ್ತಾರೆ, ಸಪ್ಲಿಮೆಂಟರಿಯನ್ನೇ ಕೇಳುವುದಿಲ್ಲ, ಭಾಷಣ ಮಾಡುತ್ತಾರೆ.

ಶ್ರೀ ಕೆ.ಹೆಚ್.ರಂಗನಾಥ್: ಮಾನ್ಯ ಅಧ್ಯಕ್ಷರೇ, What is the degree that is now, ಎಂದರೆ ನಾನು ಏನನ್ನು ಹೇಳಲಿ?

ಅಧ್ಯಕ್ಷರು: ಮಾನ್ಯ ಸುಬ್ಬಾರೆಡ್ಡಿಯವರೆ, ಒಂದೊಂದು ಸರ್ಕಲ್‌ನಲ್ಲೂ ಡಿಗ್ರಿಯನ್ನು ನೋಡಲು ಆಗುತ್ತದೆಯೇ?

ಶ್ರೀ ಎಸ್.ಸುರೇಶ್‌ಕುಮಾರ್: ಮಾನ್ಯ ಅಧ್ಯಕ್ಷರೆ, ಬಹಳ ಗಂಭೀರವಾದ ಪ್ರಶ್ನೆ ಬಂದಿದೆ, ತಾವು ಅದಕ್ಕೆ ಉತ್ತರ ಕೊಟ್ಟಿದ್ದೀರಿ. ಬೆಂಗಳೂರಿನಲ್ಲಿ ವಾಯು, ಶಬ್ದ, ಜಲ ಮಾಲಿನ್ಯವಿರಬಹುದು, ಅವೆಲ್ಲವೂ ಡೇಂಜರಸ್ ಮಟ್ಟಕ್ಕಿಂತ ಜಾಸ್ತಿಯಾಗುತ್ತಿದೆ. ಬೆಂಗಳೂರಿಗಿಂತ ದೆಹಲಿಯಲ್ಲಿ ಇದು ಜಾಸ್ತಿಯೆಂದು ನಾವು ಕೇಳಿದ್ದವು. ಆದರೆ ದೆಹಲಿಯಲ್ಲಿ ಸುಪ್ರೀಮ್ ಕೋರ್ಟ್ ಮಧ್ಯೆ ಪ್ರವೇಶಿಸಿ ಸಾರ್ವಜನಿಕ ವಾಹನಗಳಿಗೆಲ್ಲಾ ಅದು ಬಸ್, ಆಟೋರಿಕ್ಷಾ, ಟ್ಯಾಕ್ಸಿ ಇರಬಹುದು ಕಂಪ್ರೆಸ್ಡ್ ನ್ಯಾಚುರಲ್ ಗ್ಯಾಸನ್ನು ಕಡ್ಡಾಯ ಮಾಡಿದ ಮೇಲೆ ದೆಹಲಿಗಿಂತ ಬೆಂಗಳೂರಿನಲ್ಲಿ ಮಾಲಿನ್ಯ ಜಾಸ್ತಿಯಾಗಿದೆ. ವಿಶೇಷವಾಗಿ ಮಕ್ಕಳ ಮೇಲೆ ಕೆಟ್ಟ ಪರಿಣಾಮ ಬೀರುವಂತಾಗಿದೆ. ಆದ್ದರಿಂದ ಸರ್ಕಾರ ಬೆಂಗಳೂರಿನಲ್ಲಿನ ವಾಹನಗಳಿಗೆ ಕಂಪ್ರೆಸ್ಡ್ ನ್ಯಾಚುರಲ್ ಗ್ಯಾಸನ್ನು ಅಳವಡಿಸಿಕೊಳ್ಳುವುದನ್ನು ಕಡ್ಡಾಯ ಮಾಡುವ ಬಗ್ಗೆ ಯೋಚನೆ ಮಾಡುತ್ತಿದೆಯೇ? ಎರಡನೆಯದಾಗಿ, ಬೆಂಗಳೂರಿನಲ್ಲಿ ಮಾಲಿನ್ಯವನ್ನು ಹೀರಿಕೊಳ್ಳುವಷ್ಟು ಮರಗಳು ಇಲ್ಲವೆಂದು ಒಂದು ವರದಿ ತಿಳಿಸುತ್ತದೆ. ಬೆಂಗಳೂರಿನಲ್ಲಿ ಸುಮಾರು ಹದಿನಾರು ಲಕ್ಷ ವಾಹನಗಳು ಇದೆ. ಒಟ್ಟಾರೆ ವಾಹನಗಳಿಂದ ಆರು ಸಾವಿರ ಟನ್ ಕಾರ್ಬನ್ ಡೈಯಾಕ್ಸೈಡ್ ಬರುತ್ತಿದೆ. ಒಂದು ಮರ ಗರಿಷ್ಟ ಹದಿನಾರು ಗ್ರಾಮ್‌ನಷ್ಟನ್ನು ಹೀರಿಕೊಳ್ಳಬಹುದು. ಹಾಗಾದರೆ ಬೆಂಗಳೂರಿನಲ್ಲಿ ಇವತ್ತು ನಲವತ್ತೈದು ಲಕ್ಷ

ಮರಗಳು ಬೇಕು. ಆದರೆ ಮರಗಳು ಇಲ್ಲ. ಯಾವ್ಯಾವುದೋ ಕಾರಣಕ್ಕಾಗಿ ಮರಗಳನ್ನು ಕಡಿಯುತ್ತಿದ್ದೇವೆ, ಅಷ್ಟೇ ಸಂಖ್ಯೆಯಲ್ಲಿ ಗಿಡಗಳನ್ನು ನೆಡುತ್ತಿಲ್ಲ. ಆದ್ದರಿಂದ ಬಹಳ ದೊಡ್ಡ ಮಟ್ಟದಲ್ಲಿ ಮರಗಳನ್ನು ನೆಡುವ ಕಾರ್ಯಕ್ರಮವೇನಾದರೂ ಇದೆಯೇ?

ಶ್ರೀ ಕೆ.ಹಚ್.ರಂಗನಾಥ್: ಮಾನ್ಯ ಅಧ್ಯಕ್ಷರೆ, ಕಂಪ್ರೆಸ್ಡ್ ನ್ಯಾಚುರಲ್ ಗ್ಯಾಸ್ ಪದ್ಧತಿಯ ಬಗ್ಗೆ ಮಾನ್ಯ ಸದಸ್ಯರೇನು ಪ್ರಪೋಸ್ ಮಾಡುತ್ತಿದ್ದಾರೆ. ಆ ಅನುಕೂಲ ಬೆಂಗಳೂರಿನಲ್ಲಿಲ್ಲ. ಬೆಂಗಳೂರಿನಲ್ಲಿ ಏನಿದೆ ಎಂಬುದನ್ನು ನಾನು ಉತ್ತರದಲ್ಲಿ ವಿಷದವಾಗಿ ಹೇಳಿದ್ದೇನೆ. ಬೆಂಗಳೂರಿನ ನಾಲ್ಕು ಕಡೆಗಳಲ್ಲಿ ಮಾಲಿನ್ಯದ ಬಗ್ಗೆ ಅಳತೆ ಮಾಡುವ ವ್ಯವಸ್ಥೆಯನ್ನು ಮಾಡಿದ್ದೇವೆ. ಅವೆಲ್ಲವೂ ಎಲೆಕ್ಟ್ರಾನಿಕ್ ವ್ಯವಸ್ಥೆಗಳು. ಅದರ ಮೂಲಕ ಸರಿಯಾಗಿ ಅಳತೆ ಮಾಡಬೇಕಾಗಿದ್ದರೆ ವಿದ್ಯುತ್ ಸರಬರಾಜು ಸದಾ ಇರಬೇಕಾಗುತ್ತದೆ. ವಿದ್ಯುತ್ ಸರಬರಾಜಿನಲ್ಲಿ ಆಗುತ್ತಿರತಕ್ಕಂಥ ಸ್ವಲ್ಪ ಅನಾನುಕೂಲದಿಂದ ಅದರಲ್ಲಿ ತೊಂದರೆಯಾಗುತ್ತಿರುತ್ತದೆ. ಮೆಕಾನಿಕಲ್ ಆಗಿ ಅಳತೆ ಮಾಡತಕ್ಕದ್ದು ಇದೆ, ಆದರೆ ಅದರ ಮೂಲಕ ಅಳತೆ ಮಾಡಲು ಸುಮಾರು ಎಂಟು ಗಂಟೆಗಳ ಕಾಲ ಕಾಯಬೇಕಾಗುತ್ತದೆ. ವ್ಯವಸ್ಥಿತವಾಗಿ ಆಧುನಿಕ ತಂತ್ರಜ್ಞಾನವನ್ನು ಬಳಸಿಕೊಂಡು ಅಳತೆ ಮಾಡುವ ಅನುಕೂಲಗಳು ಇಲ್ಲ. ಮಾನ್ಯ ಸುರೇಶ್‌ಕುಮಾರ್‌ರವರು, ಮಾಲಿನ್ಯವನ್ನು ಮರಗಳು ಹೀರಿಕೊಳ್ಳುವ ಬಗ್ಗೆ ಹೇಳಿದ್ದಾರೆ. ಇದು ನ್ಯಾಚುರಲ್ ಮಾಡತಕ್ಕದ್ದು. ಬೆಂಗಳೂರಿನಲ್ಲಿ ಮರಗಳು ಜಾಸ್ತಿ ಇಲ್ಲ ಎಂಬುದನ್ನು ನಾನು ಒಪ್ಪುವುದಿಲ್ಲ. ಆದರೆ ಮರಗಳ ಸಂಖ್ಯೆ ಹೆಚ್ಚು ಮಾಡಬೇಕಾಗುತ್ತದೆ. ಇದರಲ್ಲಿರತಕ್ಕಂಥ ಅನಾನುಕೂಲಗಳು ಏನೆಂದರೆ, ವಾಹನಗಳ ಸಂಖ್ಯೆ ಬಹಳ ಜಾಸ್ತಿ ಇದೆ. ಇವಲ್ಲದೆ ದೆಹಲಿಯಲ್ಲಿ ಸುಪ್ರೀಮ್ ಕೋರ್ಟ್‌ನವರು ಹದಿನೈದು ವರ್ಷಗಳಿಗಿಂತ ಮೇಲ್ಪಟ್ಟರುವ ವಾಹನಗಳಿಂದ ಮಾಲಿನ್ಯ ಜಾಸ್ತಿಯಾಗುತ್ತದೆ, ಆದ್ದರಿಂದ ಇಂಥ ವಾಹನಗಳನ್ನು ನಿಷೇಧ ಮಾಡಬೇಕೆಂದು ತಮ್ಮ ಅಭಿಪ್ರಾಯವನ್ನು ವ್ಯಕ್ತ ಮಾಡಿರುತ್ತಾರೆ. ಬೆಂಗಳೂರಿನಲ್ಲಿ ವಾಹನಗಳ ಆಯಸ್ಸನ್ನು ಎಷ್ಟಕ್ಕೆ ನಿಗದಿ ಮಾಡಬೇಕು ಎಂಬ ಬಗ್ಗೆ ನಾವು ವಿಚಾರ ಮಾಡುತ್ತಿದ್ದೇವೆ. ಆದರೆ ಅದರ ಬಗ್ಗೆ ಇನ್ನೂ ಕ್ರಮ ತೆಗೆದುಕೊಂಡಿಲ್ಲ. ನಾವು ಬೇರೆ ಏನೇನು ಕ್ರಮಗಳನ್ನು ತೆಗೆದುಕೊಂಡಿದ್ದೇವೆ ಎಂಬ ಬಗ್ಗೆ ಲಿಖಿತ ಮೂಲಕ ನಾನು ಉತ್ತರವನ್ನು ಕೊಟ್ಟಿದ್ದೇನೆ. ಆಯಸ್ಸು ಜಾಸ್ತಿಯಾಗಿರುವ ವಾಹನಗಳನ್ನು ನಿಷೇಧ ಮಾಡುವುದರಿಂದ ಅನುಕೂಲವಾಗುತ್ತದೆ ಎಂದು ನನ್ನ ಭಾವನೆ. ಆದರೆ ಅದರಿಂದ ಕೆಲವೊಂದು ತೊಂದರೆಯೂ ಇದೆ. ಉದಾಹರಣೆಗೆ, ಒಬ್ಬ ಆಟೋರಿಕ್ಷಾ ಒಂದನ್ನು ಇಟ್ಟುಕೊಂಡು ಜೀವನ ಮಾಡುತ್ತಿರುತ್ತಾನೆ. ಅದರಿಂದ ಹೆಚ್ಚು ಹೊಗೆ ಬಂತು ಎಂದು ತಕ್ಷಣ ನಿಲ್ಲಿಸಿಬಿಡು ಎಂದರೆ ಅವನ ಜೀವನಕ್ಕೆ ತೊಂದರೆಯಾಗುತ್ತದೆ. ಆದ್ದರಿಂದ ಇದು ಬಹಳ ಕಷ್ಟಕರವಾದ ವಿಚಾರ. ಕಾರ್ಬನ್ ಮಾನಾಕ್ಸೈಡ್ ಏನಿದೆ ಅದು ದೊಡ್ಡವರಿಗಿಂತ ಮಕ್ಕಳ

ಶ್ವಾಸಕೋಶಕ್ಕೆ ಹೋಗಿ ರಕ್ತಕ್ಕೆ ಸೇರಿದರೆ ತುಂಬಾ ತೊಂದರೆಯಾಗುತ್ತದೆ. ಈ ದೃಷ್ಟಿಯಿಂದ ಸರ್ಕಾರ ಇದರ ಬಗ್ಗೆ ಬಹಳ ಗಂಭೀರವಾಗಿ ಪರಿಗಣಿಸುತ್ತಿದೆ. ವಾಹನಗಳ ಆಯಸ್ಸನ್ನು ನಿಗದಿ ಮಾಡಲೇಬೇಕಾಗುತ್ತದೆ. ಆ ರೀತಿ ಮಾಡುವಾಗ ರಾಜ್ಯಮಟ್ಟದಲ್ಲಿ ಏಕಾರವನ್ನು ತಿಳಿಸಿ ಅದರಿಂದ ಅನಾನುಕೂಲವೇನಾಗುತ್ತದೆ ಎಂಬುದನ್ನು ತಿಳಿದುಕೊಂಡು ಮಾಡುತ್ತೇವೆ. ಏಕೆಂದರೆ ಸಣ್ಣಪುಟ್ಟ ವಾಹನಗಳನ್ನು ಇಟ್ಟುಕೊಂಡು ಜೀವನ ಮಾಡುತ್ತಿರುವವರೆಲ್ಲಾ ಸೆಲ್ಫ್ ಎಂಪ್ಲಾಯ್ಡ್ ಜನರು. ಬೆಂಗಳೂರಿನಲ್ಲಿ ಪಬ್ಲಿಕ್ ಟ್ರಾನ್ಸ್‌ಪೋರ್ಟ್ ಸಿಸ್ಟಂ ಅಷ್ಟೇನೂ ಚೆನ್ನಾಗಿಲ್ಲ. ಮಾನ್ಯ ಸದಸ್ಯರು ಏನು ಸಲಹೆಗಳನ್ನು ಕೊಟ್ಟಿದ್ದಾರೆ ಅದನ್ನು ಗಮನದಲ್ಲಿ ಇಟ್ಟುಕೊಂಡು ಇದರ ಬಗ್ಗೆ ಪರಿಶೀಲನೆ ಮಾಡುತ್ತೇವೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಮಾನ್ಯ ಅಧ್ಯಕ್ಷರೆ, ರಾಜ್ಯ ಸರ್ಕಾರವು ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿಯಲ್ಲೇನು ಮಾಲಿನ್ಯವಿತ್ತು! ಅದನ್ನು ತೆಗೆದುಹಾಕಿದ್ದಾರೆ. ಪತ್ರಿಕೆಗಳಲ್ಲಿ, ಜನರಲ್ಲಿ ಅಲ್ಲಿದ್ದ ಒಳ್ಳೆಯ ಜನರ ಬಗ್ಗೆ ಅಭಿಪ್ರಾಯವೇನಿತ್ತು ಅದನ್ನು ಗಮನಿಸಿ ಅದನ್ನು ಸ್ವಚ್ಛ ಮಾಡಿದ್ದೀರಿ, ಅದಕ್ಕೆ ಮೆಚ್ಚುಗೆ ಸೂಚಿಸುತ್ತೇನೆ. ಮಾಲಿನ್ಯ ನಿಯಂತ್ರಣ ಮಂಡಳಿಯವರು ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಮತ್ತು ವಾಹನ ಇಲಾಖೆಯ ಸಹಯೋಗದೊಂದಿಗೆ ಬೆಂಗಳೂರಿನಲ್ಲಿ ನಾಲ್ಕೈದು ಕಡೆಗಳಲ್ಲಿ ಮಾಲಿನ್ಯ ಎಷ್ಟಿದೆ ಎಂಬ ಬಗ್ಗೆ ಎಲೆಕ್ಟ್ರಾನಿಕ್ಸ್ ಬೋರ್ಡ್‌ನ್ನು ಡಿಸ್‌ಪ್ಲೇ ಮಾಡಿದ್ದರು. ಅದನ್ನು ನಾನೇ ಇನ್ಯಾಗುರೇಟ್ ಮಾಡಿದ್ದೆ. ಆ ಎಲ್ಲಾ ಬೋರ್ಡ್‌ಗಳು ಆರು ತಿಂಗಳಿನಲ್ಲಿ ನಾಪತ್ತೆಯಾಗಿವೆ. ಏಕೆ ಈ ರೀತಿಯಾಗಿದೆ ಎಂಬುದನ್ನು ಪತ್ತೆ ಮಾಡಲು ಸಾಧ್ಯವೇ?

ಶ್ರೀ ಕೆ.ಹೆಚ್.ರಂಗನಾಥ್: ನನಗೆ ಗೊತ್ತಿರುವ ಪ್ರಕಾರ ಯು.ಬಿ. ಸರ್ಕಲ್‌ನಲ್ಲಿದ್ದ ಒಂದು ಮಾತ್ರ ಕೆಟ್ಟು ಹೋಗಿದೆ. ಬಾಕಿಯದೆಲ್ಲಾ ಕೆಲಸ ಮಾಡುತ್ತಿದೆ.

ಶ್ರೀ ಎಸ್.ಸುರೇಶ್‌ಕುಮಾರ್: ಮಾಲಿನ್ಯದ ಪ್ರಭಾವ ಹೇಗಿದೆಯೆಂದರೆ ಅದನ್ನು ಅಳತೆ ಮಾಡುವ ಯಂತ್ರಗಳನ್ನೇ ಕದಿಸುವಷ್ಟಿದೆ!

ಶ್ರೀ ಕೆ.ಹೆಚ್.ರಂಗನಾಥ್: ಮಾನ್ಯ ಸದಸ್ಯರು ಹೇಳಿದ್ದನ್ನು ಒಪ್ಪಬೇಕಾಗುತ್ತದೆ. ಇಡೀ ರಾಷ್ಟ್ರದಲ್ಲಿ ಎಲ್ಲೂ ಇಲ್ಲದಿರುವಷ್ಟು ವಾಹನಗಳ ಸಂಖ್ಯೆ ಬೆಂಗಳೂರಿನಲ್ಲಿದೆ. ಬಾಂಬೆಗಿಂತ ಜಾಸ್ತಿ ಇದೆಯೆಂದು ಕೆಲವು ದಿವಸಗಳ ಹಿಂದೆ ಪತ್ರಿಕೆಯಲ್ಲಿ ಬಂದಿತ್ತು.

ಶ್ರೀ ಸಿ.ಚನ್ನಿಗಪ್ಪ: ಮಾನ್ಯ ಅಧ್ಯಕ್ಷರೆ, ಮಾಲಿನ್ಯದಿಂದ ಆಗುವ ಅನಾಹುತಕ್ಕಾಗಿ ಆರೋಗ್ಯ ಇಲಾಖೆಯಿಂದ ಕೋಟ್ಯಾಂತರ ರೂಪಾಯಿಗಳನ್ನು ಸರ್ಕಾರ ಖರ್ಚು ಮಾಡುತ್ತದೆ. ಆದ್ದರಿಂದ ಮಾಲಿನ್ಯವನ್ನು ನಿಯಂತ್ರಣ ಮಾಡಿದರೆ ಸರ್ಕಾರಕ್ಕೆ ಆ ಹಣ

ಉಳಿತಾಯವಾಗುತ್ತದೆ. ಜನರ ಆರೋಗ್ಯವೂ ಸುಧಾರಿಸುತ್ತದೆ. ಬೆಂಗಳೂರಿನಲ್ಲಿ ಸ್ವಚ್ಛತೆಯನ್ನು ಕಾಪಾಡಿದಂತಾಗುತ್ತದೆ. ಆದ್ದರಿಂದ ಸರ್ಕಾರ ಇದರ ಬಗ್ಗೆ ಕೂಡಲೇ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಕೆ.ಎನ್.ಸುಬ್ಬಾರೆಡ್ಡಿ: ಮಾನ್ಯ ಅಧ್ಯಕ್ಷರೇ, ವಾಹನಗಳ ವಿರುದ್ಧ ಮೊಕದ್ದಮೆಗಳನ್ನು ಹೂಡಲಾಗಿದೆ ಎಂದು ಮಾನ್ಯ ಸಚಿವರು ಹೇಳಿದ್ದಾರೆ. ಇದರಲ್ಲಿ ಪೋಲೀಸ್ ಇಲಾಖೆಯ ವ್ಯಾನ್‌ಗಳೆಷ್ಟು ಎಂಬ ಬಗ್ಗೆ ವಿವರ ಕೊಡಲು ಸಾಧ್ಯವಾಗುತ್ತದೆಯೇ? ಯಾವುದೇ ಒಂದು ಪೋಲೀಸ್ ವ್ಯಾನ್ ಹೋದರೂ ಕೂಡ ಅದು ತೀವ್ರತರವಾಗಿ ಹೊಗೆ ಬಿಟ್ಟು ಪರಿಸರವನ್ನು ಮಾಲಿನ್ಯಗೊಳಿಸುತ್ತಿರುವುದನ್ನು ನಾವು ನೋಡಿದ್ದೇವೆ. ಬಹುಶಃ ಮಾನ್ಯ ಗೃಹ ಸಚಿವರು ಹೊಸ ವಾಹನಗಳಿಗೆ ಬದಲಾಗಿ ಹಳೆಯ ವಾಹನಗಳನ್ನೇ ಕಂಟಿನ್ಯೂ ಮಾಡಿಸುತ್ತಿರುವುದು ಇದಕ್ಕೆ ಕಾರಣ ಇರಬಹುದು. ನಗರದಲ್ಲಿ ಮಾಲಿನ್ಯ ಉಂಟು ಮಾಡುವ ಕೈಗಾರಿಕೆಗಳ ವಿರುದ್ಧ ಯಾವ ರೀತಿಯ ಕ್ರಮ ಜರುಗಿಸಿದ್ದೀರಿ? ಕೈಗಾರಿಕೆಗಳಿಂದ ಬಹಳ ಪ್ರಮಾಣದಲ್ಲಿ ಹೊಗೆ ಬರುತ್ತಿದೆ. ದೆಹಲಿಯಲ್ಲಿ ಸುಪ್ರೀಂ ಕೋರ್ಟ್‌ನ ಡೈರೆಕ್ಷನ್ ಮೇರೆಗೆ ಅನೇಕ ಕೈಗಾರಿಕೆಗಳನ್ನು ನಗರದಿಂದ ಎತ್ತಂಗಡಿ ಮಾಡಲಾಗಿದೆ. ಆ ರೀತಿ ಏನಾದರೂ ಇಲ್ಲಿ ಮಾಡಿದ್ದೀರಾ? ಮಾನ್ಯ ಸಚಿವರನ್ನು ಅನೇಕ ಸಲ ನಾವು ಮರ ಹಾಕುವುದಕ್ಕೆ ಕರೆದಿದ್ದೇವೆ. ಆದರೆ ಅವರು ಬರುತ್ತಿಲ್ಲ.

ಅಧ್ಯಕ್ಷರು: ನೀವು ವಿಷಯ ಬಿಟ್ಟು ಎಲ್ಲಿಗೋ ಹೋಗುತ್ತಿದ್ದೀರಿ. ಬೇರೆ ವಿಚಾರಗಳನ್ನು ಇಲ್ಲಿ ಚರ್ಚಿಸಬೇಡಿ. ಸಪ್ಲಿಮೆಂಟರಿ ಪ್ರಶ್ನೆಗಳನ್ನು ಮಾತ್ರ ಕೇಳಿ. ಸಪ್ಲಿಮೆಂಟರಿ ಕೇಳುವುದನ್ನು ಬಿಟ್ಟು ಉಳಿದೆಲ್ಲಾ ವಿಚಾರಗಳನ್ನು ನೀವಿಲ್ಲಿ ಮಾತನಾಡುತ್ತಿದ್ದೀರಿ.

ಶ್ರೀ ಕೆ.ಎನ್.ಸುಬ್ಬಾರೆಡ್ಡಿ: ಮಾಲಿನ್ಯ ಉಂಟು ಮಾಡುತ್ತಿರುವ ಕೈಗಾರಿಕೆಗಳ ಮೇಲೆ ಎಷ್ಟು ಮೊಕದ್ದಮೆಗಳನ್ನು ಹಾಕಿದ್ದೀರಿ? ಪೋಲೀಸ್ ವ್ಯಾನ್‌ಗಳ ಮೇಲೆ ಎಷ್ಟು ಕೇಸ್ ಹಾಕಲಾಗಿದೆ ಎಂಬುದನ್ನು ಮಾನ್ಯ ಸಚಿವರು ತಿಳಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು: ಇದೊಂದೇ ಪ್ರಶ್ನೆ 10 ನಿಮಿಷಕ್ಕೂ ಹೆಚ್ಚು ಸಮಯ ತೆಗೆದುಕೊಂಡಿದೆ. ಇಂದಿನ ಅಜೆಂಡಾದಲ್ಲಿರುವ 15 ಪ್ರಶ್ನೆಗಳಿಗೂ ಉತ್ತರ ಬಂದಿದೆ. ಪ್ರತಿ ಪ್ರಶ್ನೆಗೂ ಈ ರೀತಿ ಆದರೆ ನಾನು ಪ್ರಶ್ನೋತ್ತರ ಕಲಾಪವನ್ನು ಹೇಗೆ ನಿರ್ವಹಿಸಬೇಕು? ಇವತ್ತು ಪ್ರಶ್ನೆಗಳೇನಾದರೂ ಲ್ಯಾಪ್ಸ್ ಆದರೆ ಮತ್ತೊಮ್ಮೆ ಅವುಗಳನ್ನು ರಿವೈವ್ ಮಾಡುವುದಿಲ್ಲ. ಇವತ್ತು ಬಾರದ ಪ್ರಶ್ನೆಗಳು ಲ್ಯಾಪ್ಸ್ ಆದಂತೆಯೇ! ನಾನೇನೂ ಮಾಡಲಿಕ್ಕಾಗುವುದಿಲ್ಲ.

ಶ್ರೀ ಕೆ.ಹೆಚ್.ರಂಗನಾಥ್: ಮಾನ್ಯ ಅಧ್ಯಕ್ಷರೇ, ಈಗಾಗಲೇ ನಾನು ನನ್ನ ಉತ್ತರದಲ್ಲಿ

ತಿಳಿಸಿರುವಂತೆ ಸರ್ಕಾರಿ ವಾಹನಗಳನ್ನೂ ಕೂಡ ಪರೀಕ್ಷೆ ಮಾಡಲಾಗಿದೆ. ಸುಮಾರು 55 ವೆಹಿಕಲ್‌ಗಳ ಮೇಲೆ ಪರಿಸರ ಮಾಲಿನ್ಯ ಮಂಡಳಿಯವರು ಕೇಸ್ ಹಾಕಿದ್ದಾರೆ. ಇನ್ನು ಕೈಗಾರಿಕೆಗಳಿಗೆ ಸಂಬಂಧಪಟ್ಟಂತೆ ಹೇಳುವುದಾದರೆ, ಅಲ್ಲೂ ಕೂಡ ಪರೀಕ್ಷೆ ಮಾಡುತ್ತಿದ್ದಾರೆ ಎಂದು ಹೇಳಬಯಸುತ್ತೇನೆ. ಮಾನ್ಯ ಸದಸ್ಯರು ಗಿಡ ನೆಡಲು ಕರೆದರೆ ನಾನು ಬರುವುದಿಲ್ಲ ಎಂದು ಹೇಳಿದರು. ಅವರು ಒಂದು ಸಾರಿ ನನ್ನನ್ನು ಕರೆದಿದ್ದರು, ನಾನು ಹೋಗಿದ್ದೆ, ಆದರೆ ಅವರೇ ಬರಲಿಲ್ಲ. ಆದರೂ ಅವರು ನನ್ನ ಮೇಲೆ ಈ ರೀತಿ ಆರೋಪ ಮಾಡುತ್ತಿದ್ದಾರೆ. ಪಾಪ! ಅವರಿಗೇನೋ ಬಾಯಿ ಚಟ ಇದೆ, ಹೇಳಿಕೊಳ್ಳುತ್ತಾರೆ ಬಿಡಿ. ಮೊದಲನೇ ಸಾರಿ ಮಾನ್ಯ ಸದಸ್ಯರು ನನಗೆ ಆಹ್ವಾನ ನೀಡಿದಾಗ ನಾನು ಹೋಗಿದ್ದೆ, ಆದರೆ ಇವರೇ ಅಲ್ಲಿಗೆ ಬಂದಿರಲಿಲ್ಲ. ಇನ್ನೊಂದು ಸಾರಿ ಅವರು ಕರೆದಾಗ ನನಗೆ ಅನಾನುಕೂಲವಾದ್ದರಿಂದ ನಾನು ಹೋಗಲಾಗಲಿಲ್ಲ. ಮೆಂಬರ್ಸ್‌ಗಳು ಕರೆದ ಕಡೆಯಲ್ಲೆಲ್ಲಾ ನಾನು ಹೋಗಲೇಬೇಕು ಎನ್ನುವಂತಹ ಕಾನೂನು ಕೂಡ ಇಲ್ಲ. ಬಹುಶಃ ನನ್ನ ಬಗ್ಗೆ ಅವರ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ನಾನು ವಕೀಲಿ ಬಾರ್‌ನಲ್ಲಿ ಇದ್ದ ಕಾಲದಿಂದಲೂ ಸಹ ನಾನು ಅವರನ್ನು ನೋಡುತ್ತಿದ್ದೇನೆ. ಸದಸ್ಯರು ಕರೆದಾಗ ನಾನು ಹೋಗುವುದಿಲ್ಲ ಎನ್ನುವಂತಹ ಅಪಾದನೆ ನಿರಾಧಾರವಾದುದು. ಮೇಲಿಂದ ಮೇಲೆ ಇಂತಹ ಆರೋಪ ಮಾಡಿದರೆ ಅದು ತಪ್ಪಾಗುತ್ತದೆ. ಇದರಿಂದ ನಾನು ಹೆದರುತ್ತೇನೆ ಎಂದು ತಿಳಿದುಕೊಂಡು ಮಾನ್ಯ ಸದಸ್ಯರು ಇಂತಹ ಆರೋಪ ಮಾಡಿದ್ದರೆ, ನಾನು ಇದಕ್ಕೆಲ್ಲಾ ಹೆದರುವುದಿಲ್ಲ, ನಾನು ನನ್ನ ಕೆಲಸವನ್ನು ನನ್ನ ಆತ್ಮಕ್ಕೆ ಒಪ್ಪುವ ರೀತಿಯಲ್ಲಿ ಮಾಡುತ್ತೇನೆ ಎಂದು ಹೇಳಬಯಸುತ್ತೇನೆ.

ರಾಜ್ಯದ ಕರಾವಳಿ ಪ್ರದೇಶಗಳಲ್ಲಿ ಮೀನುಗಳ ಸಂತಾನಾಭಿವೃದ್ಧಿ.

173(1842)

ಶ್ರೀ ಪ್ರಭಾಕರ ಬಂಗೇರ ಕೆ.(ಬೆಳ್ತಂಗಡಿ): ಮಾನ್ಯ ಮೀನುಗಾರಿಕೆ, ಬಂದರು ಮತ್ತು ಪ್ರದೇಶಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯಪಟ್ಟು ಉತ್ತರಿಸುವರೆ?

ಅ) ರಾಜ್ಯದ ಕರಾವಳಿ ಪ್ರದೇಶಗಳಲ್ಲಿ ಮೀನುಗಳ ಸಂತಾನಾಭಿವೃದ್ಧಿ ಮಾಡಲು ಸರ್ಕಾರದವರು ಕೈಗೊಂಡ ಕ್ರಮಗಳೇನು?

ಆ) ಒಳನಾಡು ಪ್ರದೇಶಗಳ ಕೆರೆ, ನದಿಗಳಲ್ಲಿ ಮೀನುಗಾರಿಕೆ ತಳಿ ಅಭಿವೃದ್ಧಿ ಮತ್ತು ಮೀನುಗಾರಿಕೆಗೆ ಪ್ರೋತ್ಸಾಹ ನೀಡುವ ಯೋಜನೆಗಳು ಯಾವುವು?

ಇ) ಮೀನುಗಾರಿಕೆ ಇಲಾಖೆಯಿಂದ ಒಳನಾಡು ಮೀನುಗಾರಿಕೆ ಅಭಿವೃದ್ಧಿ ಮತ್ತು